




# ರಿಂಗ್ ಅಲ್ಲ.. ಕಿವಿ ರಂಧ್ರ.!

ಕಿವಿಯ ಹಾಲೆಯನ್ನು ತೂತು ಮಾಡಿ ಅದರಲ್ಲಿ ಆಭರಣಗಳನ್ನು ಧರಿಸುವ ಪದ್ಧತಿ ಎಲ್ಲ ಕಡೆಯೂ ಇದೆ. ಕಿವಿ ಚುಚ್ಚಿ ತೂತು ಮಾಡುವ ಕ್ರಿಯೆ ಚಿಕ್ಕ ಮಕ್ಕಳಿದ್ದಾಗಲೇ ನಡೆಯುತ್ತದೆ. ಏಕೆಂದರೆ, ದೊಡ್ಡವರಾದ ಮೇಲೆ ಕಿವಿ ಚುಚ್ಚಿದರೆ ಮಕ್ಕಳಿಗೆ ನೋವಾಗಬಹುದು ಎಂಬ ಕಾರಣದಿಂದ.

ಚುಚ್ಚಿದ ಮೇಲೆ ಆ ತೂತು ಮುಚ್ಚದಿರಲಿ ಎಂದು ಬಂಗಾರದ ಕಡ್ಡಿಯನ್ನು ಹಾಕುತ್ತಾರೆ. ಮುಂದೆ ಭಾರವಾದ ಆಭರಣ ಧರಿಸಿದರೆ ಆ ತೂತು ದೊಡ್ಡದಾಗುತ್ತ ಹೋಗುತ್ತದೆ.

ಹವಾಯಿ ದ್ವೀಪದಲ್ಲಿರುವ ಕಾಲಾ ಕೈವಿ ಎಂಬ ವ್ಯಕ್ತಿ ತನ್ನ ಕಿವಿಯ ಹಾಲೆಯ ತೂತನ್ನು ಎಷ್ಟು ದೊಡ್ಡದು ಮಾಡಿಕೊಂಡಿದ್ದಾನೆ ಎಂದರೆ ನಿಮ್ಮ ಕೈಯನ್ನು ಆ ತೂತಿನಲ್ಲಿ ಆರಾಮವಾಗಿ ತೂರಿಸಬಹುದು. ಮನುಷ್ಯನ ದೇಹದಲ್ಲಿ, ಶಸ್ತ್ರಚಿಕಿತ್ಸೆ ಇಲ್ಲದೆ ಇಷ್ಟು ದೊಡ್ಡ ರಂಧ್ರವಾದ ಉದಾಹರಣೆ ಬೇರೆ ಎಲ್ಲೂ ಇಲ್ಲ. ಅದೂ ಒಂದೇ ಕಿವಿಯಲ್ಲಿ ಅಲ್ಲ, ಎರಡೂ ಕಿವಿಗಳಲ್ಲಿ..!

4.3 ಅಂಗುಲ ಅಥವಾ 103 ಮಿಲಿ ಮೀಟರ್ ಅಗಲದಷ್ಟು ದೊಡ್ಡ ಕಿವಿ ಹಾಲೆ ರಂಧ್ರವನ್ನು ಕಾಲಾ ಹೊಂದಿದ್ದಾನೆ. ಇಷ್ಟು ದೊಡ್ಡ ರಂಧ್ರವುಳ್ಳ ವಿಶ್ವದ ಏಕೈಕ ವ್ಯಕ್ತಿ ಈತ. ಇದೀಗ ಈ ಸಂಗತಿ ಗಿನ್ನೆಸ್ ವಿಶ್ವ ದಾಖಲೆಯಲ್ಲೂ ಸೇರಿದೆ.

ಇಷ್ಟೇ ಅಲ್ಲದೆ ಈತ ಅನೇಕ ಶಾರೀರಿಕ ಕಲಾ ವಿನ್ಯಾಸಗಳನ್ನೂ ತನ್ನಲ್ಲಿ ಅಳವಡಿಸಿಕೊಂಡಿದ್ದಾನೆ. ಆತನ ತಲೆಯ ಮೇಲೆ ಗುಮುಟೆಯಾಕಾರದ ಸಣ್ಣ ಸಿಲಿಕಾನ್ ಕೊಂಬುಗಳಿವೆ. ಮೂಗಿನಲ್ಲಿರುವ ರಂಧ್ರಗಳ ಗಾತ್ರವೂ ಅಚ್ಚರಿಯನ್ನು ಮೂಡಿಸುತ್ತವೆ. ಮುಖ ಹಾಗೂ ಹುಬ್ಬುಗಳ ಮೇಲೆ ಹಚ್ಚೆಗಳಿವೆ. ಮುಖದ ತುಂಬ ಗೋಲಾಕಾರದ ಅಭರಣಗಳಿವೆ. ದಂತದಾರದಿಂದ ಆತ ತನ್ನ ನಾಲಿಗೆಯನ್ನು ಸೀಳಿಕೊಂಡಿದ್ದಾನೆ.

ಈ ಬಹುರೂಪಿ ಕಾಲಾ ಕೈವಿಗೆ ಈ ರೀತಿಯ ಅಲಂಕಾರದಿಂದ ಅದೇನು ಖುಷಿಯೋ ದೇವರೇ ಬಲ್ಲ!

■ ಸುಭಾಸ ಯಾದವಾಡ

